ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಉದ್ಯೋಗ ಭರವಸೆ ಯೋಜನೆಯಡಿ ಕೂಲಿಕಾರರ ಹೆಸರುಗಳ ಪಟ್ಟಿಗಳನ್ನು ತಯಾರಿಸಲು ಈಗಾಗಲೇ, ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ನಿರ್ದೇಶನ ನೀಡಲಾಗಿದೆ.

ಆ) ಉದ್ಯೋಗ ಭರವಸೆ ಯೋಜನೆಯಡಿ ಪ್ರಸ್ತುತ ಸಾಲಿಗೆ (1995-96) ರೂ.10000 ಲಕ್ಷಗಳ ಅನುದಾನವನ್ನು ನಿಗಧಿ ಮಾಡಲಾಗಿದೆ. ಕೇಂದ್ರ ಸರ್ಕಾರದ ಮಾರ್ಗದರ್ಶನ ಮೇರೆಗೆ ಹಣವನ್ನು ವಿತರಣೆ ಮಾಡಲಾಗುವುದು.

ಇ) ಉದ್ಯೋಗ ಭರವಸೆ ಯೋಜನೆಯ ಅನುಷ್ಠಾನದ ಬಗ್ಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಉದ್ಯೋಗ ಭರವಸೆ ಯೋಜನೆ ಸಮಿತಿಗಳಲ್ಲಿ ಶಾಸಕರನ್ನು ಸದಸ್ಯರಾಗಿ ನೇಮಕ ಮಾಡಲಾಗಿದೆ.

ಹುಬ್ಬಳ್ಳಿ ಧಾರವಾಡ ರಾಷ್ಟ್ರೀಯ ಹೆದ್ದಾರಿಯ ರಸ್ತೆ ನಿರ್ಮಾಣ ಕುರಿತು.

629 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿ ಧಾರವಾಡ ಮಹಾನಗರದ ನಡುವೆ ಹಾಯ್ದು ಹೋಗಿರುವ ರಾಷ್ಟ್ರೀಯ ಹೆದ್ದಾರಿ ರಸ್ತೆ ನಿರ್ಮಾಣ ಕೆಲಸ ಪೂರ್ಣ ಮುಗಿದಿದೆಯೇ,

ಆ) ಇಲ್ಲವಾದಲ್ಲಿ ಎಷ್ಟು ಮುಗಿದಿದೆ ಮತ್ತು ಎಷ್ಟು ಉಳಿದಿದೆ,

ಇ) ಇಲ್ಲಿಯವರೆಗೆ ಆದ ಖರ್ಚು ಎಷ್ಟು, ಇದರಲ್ಲಿ ಕೇಂದ್ರ ಸರ್ಕಾರದ ಪಾಲು ಎಷ್ಟು, ರಾಜ್ಯ ಸರ್ಕಾರದ ಪಾಲು ಎಷ್ಟು, ಸದರಿ ರಸ್ತೆ ಡಾಂಬರೀಕರಣ ಕೆಲಸ ತೃಪ್ತಿಕರವಾಗಿದೆಯೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಈಗಾಗಲೇ ಹುಬ್ಬಳ್ಳಿ-ಧಾರವಾಡ ಮಹಾನಗರ ನಡುವೆ ರಾಷ್ಟ್ರೀಯ ಹೆದ್ದಾರಿ ಇದೆ.

ಆ) 'ಅ' ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಹುಬ್ಬಳ್ಳಿ-ಧಾರವಾಡ ಮಹಾನಗರದ ನಡುವೆ ರಾಷ್ಟ್ರೀಯ ಹೆದ್ದಾರಿಯ ಆಯ್ದ ಭಾಗಗಳನ್ನು ಬಲಪಡಿಸಲು ಇದುವರೆವಿಗೂ 103 ಲಕ್ಷ ರೂ. ವೆಚ್ಚವಾಗಿದ್ದು, ಪೂರ್ತಿಯಾಗಿ ರಾಜ್ಯ ಸರ್ಕಾರ ಅನುದಾನದಿಂದ ಭರಿಸಲಾಗಿದೆ. ಡಾಂಬರೀಕರಣ ತೃಪ್ತಿಯಾಗಿದೆ.

ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ರೈತರಿಗೆ ತೊಂದರೆ.

632 - ಶ್ರೀ ಎಸ್. ಕರ್ಜಗಿ (ರಾಣೆಬೆನ್ನೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರಿಗೆ ಒಂದು ದಿನ ಬಿಟ್ಟು ಒಂದು ದಿನ ವಿದ್ಯುತ್ ಪೂರೈಕೆಯಿಂದ ತೊಂದರೆಯಾಗಿರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಸರ್ಕಾರದವರು ಈ ವಿಷಯದಲ್ಲಿ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ರಾಜ್ಯವು ಎದುರಿಸುತ್ತಿರುವ ತೀವ್ರ ರೀತಿಯ ವಿದ್ಯುತ್ ಅಭಾವ ಪರಿಸ್ಥಿತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ದಿನಬಿಟ್ಟು ದಿನ 3 ಫೇಸ್‌ನಲ್ಲಿ (9 ತಾಸು ಹೊರತುಪಡಿಸಿ) ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಇದು ಅನಿವಾರ್ಯವಾಗಿರುವುದರಿಂದ ರೈತರು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಯೋಜನೆ ಸಹಕರಿಸುವುದು ಅಗತ್ಯವಾಗಿದೆ.

ಉಡುಪಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆ.

635 - ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಉಡುಪಿ ತಾಲ್ಲೂಕಿನ ಶಿರಿಯಾರ ಹಿರಿಯಾಣ, ಕಕ್ಕುಂಜೆ, ವಂದಾಲ ಅವರ್ಸೆ ಮತ್ತು ಬಿಲ್ಲಾಡಿ ಗ್ರಾಮಗಳಲ್ಲಿ ಕುಡಿಯುವ ನಲ್ಲಿ ನೀರು ಸರಬರಾಜು ಯೋಜನೆ ಮಂಜೂರಾಗಿದ್ದರೂ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸದಿರಲು ಕಾರಣವೇನು ?

ಆ) ಈ ಗ್ರಾಮಗಳ ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ?

ಇ) ಈ ಗ್ರಾಮಗಳಿಗ ನಲ್ಲಿ ನೀರಿನ ಯೋಜನೆಯಿಂದ ಕುಡಿಯುವ ನೀರಿನ ವ್ಯವಸ್ಥೆ ಎಂದು ಮಾಡಲಾಗುವುದು ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರು) :

ಅ) **ಶಿರಿಯಾಣ** : ಸೂಕ್ತ ಜಲಮೂಲ ಗುರುತಿಸಲು ತಡವಾಗಿರುತ್ತದೆ.

ಹಿರಿಯಾಣ : ಟ್ರಾನ್ಸ್‌ಫಾರ್ಮ್ ಸ್ಥಾಪಿಸಲು ತಡವಾಗಿದೆ.

ಕಕ್ಕುಂಜೆ : ಈ ಗ್ರಾಮಕ್ಕೆ ಪ್ರತ್ಯೇಕವಾಗಿ ಯೋಜನೆ ಮಂಜೂರಾಗಿರುವುದಿಲ್ಲ. ವಂಡಾರು ನೀರು ಸರಬರಾಜು ಯೋಜನೆಯಿಂದ ನೀರು ಒದಗಿಸಲು ವ್ಯವಸ್ಥೆಯಾಗಿರುತ್ತದೆ.

ವಂದಾಲ : ಟ್ಯಾಂಕ್ ಕೆಲಸ ಪ್ರಗತಿಯಲ್ಲಿರುವುದರಿಂದ ಯೋಜನೆ ವಿಳಂಬವಾಗಿದೆ.

ಅವರ್ಸೆ : ಈ ಗ್ರಾಮಕ್ಕೆ ಪ್ರತ್ಯೇಕವಾಗಿ ಯೋಜನೆ ಮಂಜೂರಾಗಿರುವುದಿಲ್ಲ.

ಬಿಲ್ಲಾಡಿ : ಸೂಕ್ತ ಜಲಮೂಲ ಗುರುತಿಸಲು ತಡವಾಗಿರುತ್ತದೆ.